ನಿತ್ಯ ಎಸ್, ಮೂಡಬಿದಿರೆ
*ರಾಮ್‌ಜಿ, ಹುಡುಗಿಯೊಬ್ಬಳು ನನಗೆ ಕನ್ನಡ ಬರಲ್ಲ ಅಂತಾಳೆ, ಏನು ಮಾಡ್ಲಿ?*




ಅದಾಗದೇ ಬರಲ್ಲ, ನೀನೇ ಅದರ ಹತ್ತಿರ ಹೋಗು, ಆಗ ಬರತ್ತೆ ಅಂತ ಹೇಳಿ.

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ನಾನು ಪ್ರಶ್ನೆ ಬರೆದೂ ಬರೆದೂ ಬೇಸತ್ತು ಪೆನ್ನನ್ನು ಅತ್ತ ಬಿಸುಟರೆ, ಕೊಂಚ ಹೊತ್ತಿಗೆ ಅದೇ ಎದ್ದುಬಂದು ಪ್ರಶ್ನೆ ಬರೆದುಬಿಡುತ್ತದಲ್ಲಾ...?*
ವಾಹ್! ಚಟ ಮೆನ್‌ಗಷ್ಟೇ ಅಲ್ಲದೆ ಪೆನ್‌ಗೂ ಹಿಡಿಯುವುದೆಂದಾಯಿತು!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಅಪ್ಪ - ಅಮ್ಮ ಬೇಡ, ಅವರು ಗಳಿಸಿದ ಆಸ್ತಿ ಬೇಕು. ಇದು ಯಾವ ನ್ಯಾಯ?*
ಸರಿಯೇ. ಪಾತ್ರೆಯಲ್ಲಿ ಆದ ಅನ್ನವನ್ನು ಮಾತ್ರ ತಿನ್ನುವರಲ್ಲದೆ ಪಾತ್ರೆಯನ್ನೇನೂ ತಿನ್ನುವುದಿಲ್ಲವಲ್ಲ ಎಂದನಾ ಪುತ್ರ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಹಿಂದೂ ಸಂಪ್ರದಾಯದಲ್ಲಿ ವಿಧವೆಯರು ಬಿಳಿಯ ಸೀರೆಯನ್ನೇ ಏಕೆ ಉಡಬೇಕು ರಾಮ್‌ಜಿ?*
ಕತ್ತಲೆ ಕೋಣೆಯಲ್ಲಿ ನೂಕಿರುತ್ತಿದ್ದರಲ್ಲಾ, ಆಕಾರವಾದರೂ ಕಾಣುವಂತಿರಲೆಂದು!

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಪ್ರೀತಿಸಿದವರು ನೋವು ಅನುಭವಿಸಲೇಬೇಕು ಅನ್ನೋದು ಯಾವ ನ್ಯಾಯ?*
ಹಿಂದಿ ಫಿಲಂನ ವಿಲನ್‌ನ ನ್ಯಾಯ!

ಪೇಂಟರ್ ಪಾಪು, ಸಂತೇಮರಹಳ್ಳಿ
*ವೈದ್ಯರನ್ನು ಭೂಲೋಕದ ನಾರಾಯಣ ಎಂದು ಏಕೆ ಕರೆಯುತ್ತಾರೆ?*




ಅವನಂತೆಯೇ ಇವರ ಬಳಿಯೂ ಅಪಾಯಿಂಟ್‌ಮೆಂಟ್‌ಗಾಗಿ ಗಂಟೆಗಟ್ಟಲೆ/ ದಿನಗಟ್ಟಲೆ ಕಾಯಬೇಕಾದ್ದರಿಂದ.

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ಬೈ ಛಾನ್ಸ್ ರಾಜಕಾರಣಿಗಳೆಲ್ಲರೂ ಪ್ರಾಮಾಣಿಕರಾಗಿಬಿಟ್ಟರೆ?*
ನೂರಾರು ಬ್ರೇಕಿಂಗ್ ನ್ಯೂಸ್ ಮಂದಿ ಕಳ್ಳಸಂಪಾದನೆ ಇಲ್ಲದೆ ಸೊರಗಿಹೋಗುತ್ತಾರೆ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ತುಂಡುಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ ಎಂಬುದನ್ನು ಅಕ್ಷರಶಃ ಪಾಲಿಸುತ್ತಿರುವವರು ಯಾರು?*
ತುಂಡುಬಟ್ಟೆಯೂ ಓಲ್ಡ್ ಫ್ಯಾಷನ್ಡ್ ಅಂತೆ ರೆಡ್ಡಿಗಾರು. ಇತ್ತೀಚಿನ ಹೀರೋಯಿನ್‌ಗಳು ಸರ್ವವಸ್ತ್ರಪರಿತ್ಯಾಗಿಗಳು!

ಬೋ.ಪಾ.ವೆಂಕಟೇಶ್, ಬೋಧನಹೊಸಹಳ್ಳಿ
*ಮಾರ್ಕೆಟ್‌ನಲ್ಲಿ ರೆಡಿಮೇಡ್ ಗಂಡ ಸಿಗುವಂತಿದ್ದರೆ?*
ಆಗಾಗ್ಗೆ ಸಾರ್ವಜನಿಕ ಗಂಡ ಹರಾಜ್ ಏರ್ಪಡುತ್ತಿತ್ತು.

ಎಂ.ಎನ್. ಸೋಮಶೇಖರ್, ಮೈಸೂರು
*ಐಶ್ವರ್ಯವಂತನೆಂದರೆ ನಿಜವಾಗಿ ಯಾರು?*
ಅಭಿಷೇಕ್ ಬಚ್ಚನ್!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಸತ್ಯ ಹೇಳುವುದು ಡೆಬಿಟ್ ಕಾರ್ಡ್ ಆದರೆ ಸುಳ್ಳು ಹೇಳುವುದು ಏನು ಸಾರ್?*
ನಿಯತ್ತಿಲ್ಲದವರ ಟ್ರಂಪ್‌ಕಾರ್ಡ್

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ನಮ್ಮ ಜನ ಬೆಣ್ಣೆ ತಿನ್ನುವಂತೆ ಮಣ್ಣು ಕೂಡ ತಿನ್ನುವಂತಿದ್ದರೆ ಈ ಪ್ರಪಂಚ ಹೇಗಿರುತ್ತಿತ್ತು?*
ಕೊಂಚ ತಾಳಿ, ಮಣ್ಣಿನ ಮಕ್ಕಳನ್ನೇ ಕೇಳಿ ಹೇಳಿಬಿಡುತ್ತೇನೆ.

ಡಿ.ಕೆ. ರಾಜ್, ಗದಗ
*ಹೃದಯದಲ್ಲಿ ಪ್ರೀತಿ ಹುಟ್ಟಲು ಕಾರಣವೇನು?*
ಲಬ್ ಡಬ್ ಲಬ್ ಡಬ್ ಎನ್ನುವುದು ತಾಳ ತಪ್ಪಿದರೆ ಲವ್ ಡವ್ ಲವ್ ಡವ್ ಆಗಿ ಪ್ರೀತಿಯ ಉದಯ!

ಹೆಚ್. ಆರ್. ಕಡಿವಾಲ, ಬದಾಮಿ
*ಇಂದು ಎಲ್ಲಾ ರಂಗಗಳಲ್ಲಿ ಸ್ತ್ರೀಯರೇ ಮುಂದೆ ಬರಲು ಕಾರಣವೇನು?*
ತಾರುಣ್ಯದಿಂದಲೇ ಸ್ತ್ರೀಯರು ಮುಂದು ಮುಂದು, ಪುರುಷರು ಹಿಂದು ಹಿಂದು ಇರುವುದು ಜಗನ್ನಿಯಮ!

ದೀಪಕ ಕೆ, ಸಿದ್ದಾಪುರ
*ದುಡ್ಡು ಕೊಟ್ಟರೂ ಜಗತ್ತಿನಲ್ಲಿ ಸಿಗದ ವಸ್ತು ಯಾವುದು?*
ಬೇಕಾದಷ್ಟಿವೆ. ಸೀಡ್‌ಲೆಸ್ ಕಡಲೆಕಾಯಿ, ಷುಗರ್‌ಲೆಸ್ ಕಬ್ಬು, ಬೋನ್‌ಲೆಸ್ ಸ್ಕೆಲಿಟನ್ನು....

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಮಗ ಬೆಳೆದಂತೆಲ್ಲ ಅಪ್ಪ ಅವನ ಗೆಳೆಯನಾಗುತ್ತ ಹೋಗಬೇಕು ಅಂತಾರಲ್ಲ, ಏಕಿರಬಹುದು?*
ಮಗ ಅಪ್ಪನ ಸೈಜ್ ತಲುಪಿದಾಗ ಚಪ್ಪಲಿ, ಬನೀನು, ಷರ್ಟು, ಪ್ಯಾಂಟ್‌ಗಳನ್ನು ಶೇರ್ ಮಾಡಿಕೊಳ್ಳಲು ಹಾಗಿರುವುದೇ ಸೂಕ್ತ!

ವಿ. ಹಮೀದ್, ವಿಟ್ಲ
*ನಿಜಜೀವನದಲ್ಲಿ ಪೂರ್ತಿಯಾಗದ ಕೆಲವು ಆಸೆಗಳು ಕನಸಿನಲ್ಲಿ ಪೂರ್ತಿ ಆಗುವುದಂತೆ, ಹೌದೆ?*
ಕವಿಕಾವ್ಯವೇ ಇದೆಯಲ್ಲ ನೀನೊಂದು ಸೀರೆಯ ನನಗಾಗಿ ತಂದಂತೆ ನಾ ಕಂಡೆ ಕನಸೊಂದನ್ನೈ; ನಾಳೆ ಆ ಸೀರೆಯ ನೀನುಟ್ಟು ಮೆರೆದಂತೆ ಕನಸೊಂದ ಕಾಣೆನ್ನ ಚೆನ್ನೆ!

ಎಂ.ಬಿ. ರಂಗಪ್ಪಸೆಟ್ಟಿ, ಮೋಕ
*ಲೋಕಾಯುಕ್ತ ರೈಡ್ ಮಾಡಿ ದಾಖಲೆ ವಶ ಮಾಡಿಕೊಳ್ಳುತ್ತದೆ, ನಂತರ ಎಲ್ಲವೂ ಠುಸ್ ಆಗುತ್ತದೆ. ಏಕೆ?*




ಕಳ್ಳ ಬರುತ್ತಾನೆ, ನಾಯಿ ಬೊಗಳುತ್ತದೆ, ಯಜಮಾನ ಮುಚ್ಚು ಬಾಯಿ ಎನ್ನುತ್ತಾನೆ, ನಾಯಿ ಮಲಗುತ್ತದೆ.

ಜಯಂತ, ನೆಲಮಂಗಲ
*ಇತ್ತೀಚೆಗೆ ಶಿಕ್ಷಕರೇಕೆ ಅತ್ಯಾಚಾರಿಗಳಾಗುತ್ತಿದ್ದಾರೆ ಸಾರ್?*
ಪ್ರಚೋದನೆ ಜಾಸ್ತಿ, ಶಿಕ್ಷೆ ನಾಸ್ತಿ ಆದ್ದರಿಂದ.

ಸಡ್ಲಪಲ್ಲಿ ರಾಮಕೃಷ್ಣಾರೆಡ್ಡಿ, ಯಲಹಂಕ
*18ರ ಹುಡುಗ ಮನೆಯಲ್ಲಿದ್ದ ಮನೀ ಪ್ಲಾಂಟ್. 20ರ ಹುಡುಗಿ ಮನೆಯಲ್ಲಿದ್ದರೆ...?*
ಎದುರು ಮನೆಯ 22ರ ಮನೀಪ್ಲಾಂಟ್‌ನ ಪ್ರಮುಖ ಆಕರ್ಷಣೆ!

■ ರಾಮ್